Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant




40$^{h}$ year of Service and Fellowship

Volume 40 Issue - 15 16th October 2025

## Club Assembly

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ರೋಟರಿ ಬಂಧುಗಳೇ

'ಸಾಗು ಜೀವವೆ ಬಾಗಿ ನಿಲ್ಲದೆ ದಾರಿ ಸವೆದಿದೆ ಮುಂದಕೆ' ಬಿ.ಕೆ. ಸುಮಿತ್ರ ಹಾಡಿದ ಭಾವಗೀತೆ ಸಂಜೆ ಕೇಳುತ್ತಿದ್ದಾಗ ನನ್ನ ತಂದೆಯವರ ಜೀವನ ಶೈಲಿ ನೆನಪಿಗೆ ಬಂತು– ಬದುಕಲು ಪ್ರತಿಯೋರ್ವನಿಗೂ ಹಲವು ದಾರಿ ಇರುತ್ತದೆ. ನಾವು ಏನನ್ನು ಆರಿಸಿಕೊಂಡಿರುತ್ತೇವೆಯೋ ಅದನ್ನು ಸಂತೋಷ ಹಾಗೂ ಸ್ವಚ್ಛ ಮನಸ್ಸಿನಿಂದ ಸ್ವೀಕರಿಸುವುದು ನಮ್ಮ ಧರ್ಮವಾಗಿರುತ್ತದೆ ಹಾಗೂ ಏನು ಕಲ ಸಿಗುವುದೋ ಅದನ್ನೂ ಸಹ ಅಷ್ಟೇ ಸಂತಸದಿಂದ ಸ್ವಾಗತಿಸುವುದು ನಮ್ಮ ಕರ್ಮವಾಗಿರುತ್ತದೆ. ಇದು ನನ್ನ ತಂದೆ ಕೆ.ಆರ್. ಕಾರಂತರು ನನಗೆ ಹೇಳುತ್ತಿದ್ದ ಪಾಠವಾಗಿತ್ತು. ಒಮ್ಮೆ ನನ್ನ ತಂದೆಯವರಲ್ಲಿ ಅವರ ಪ್ರಾಮಾಣಿಕ, ಸರಳ ಜೀವನ ಹಾಗೂ ಅವರ ಸತ್ಯಸಂದತೆ ಕಂಡು ಬೇಸತ್ತು ಇತರರನ್ನು ಹೋಲಿಸಿ ಅವರನ್ನು ಅಕ್ಷೇಪಿಸುತ್ತಿದ್ದೆ ಹಾಗೂ ಒಂದು ರೀತಿಯಲ್ಲಿ ಹಂಗಿಸುವಂತೆ "ನಿಮಗಿಂತ ಕಿರಿಯರು ವೃತ್ತಿಗೆ ಹೊಸಬರು ಅದೆಷ್ಟು ಬೇಗ ಜೀವನದಲ್ಲಿ ಅಭಿವೃದ್ಧಿ ಹೊಂದಿರುವರು. ಕಾರು, ಬಂಗಲೆ, ಕಛೇರಿ ಮಾಡಿಕೊಂಡಿದ್ದಾರೆ ತಾವು ಮಾತ್ರ ಹಿಂದೆ ಹೇಗಿದ್ದರೋ ಇಂದೂ ಹಾಗೇ ಇದ್ದೀರಿ". ಆಗ ಅವರು ನನ್ನ ಮಾತಿನಿಂದ ಅದೆಷ್ಟು ನೊಂದಿದ್ದರೋ ನನಗೆ ಗೊತ್ತಿಲ್ಲ. ಆದರೆ ನನ್ನೆದರು ಅದೇನನ್ನೂ ತೋರಿಸಿಕೊಳ್ಳದೆ ಒಂದು ಮಾತನ್ನು ತಿಳಿಸಿದರು "ನೋಡು ಜೀವನದ ಯಶಸ್ಸು ಎಂದರೆ ಹಣ ಮಾಡುವುದೊಂದೇ ಅಲ್ಲ. ನಾನು ಆರಿಸಿಕೊಂಡ ಜೀವನದ ದಾರಿ ಇದು. ನನಗೆ ಅದರಲ್ಲಿ ಸಂತೃಪ್ತಿ ಇದೆ. ಇನ್ನೋರ್ವ ನನ್ನದೇ ವೃತ್ತಿಯಲ್ಲಿರುವವನು ಹಣ ಮಾಡಿದ ಎಂಬ ಅಸೂಯೆ ನನಗಿರಬಾರದು ಒಬ್ಬೊಬ್ಬರದು ಒಂದೊಂದು ರೀತಿಯ ಜೀವನದ ಹಾದಿ. ಅದು ತಪ್ಪು ಅಂತ ಹೇಳಲು ನನಗಾವ ಅಧಿಕಾರವೂ ಇಲ್ಲ ಹಾಗೂ ಅದು ಸರಿ ಅಲ್ಲ ಎನ್ನುವುದು ನ್ಯಾಯವೂ ಅಲ್ಲ. ನೀನು ಉದಾಹರಿಸಿದಂತ ವ್ಯಕ್ತಿಗಳೂ ಸಹ ಜೀವನದಲ್ಲಿ ಯಶಸ್ಸನ್ನು ಸಾಧಿಸಿರುವರಾಗಿರುತ್ತಾರೆ ಆದರೆ ರೀತಿ ಬೇರೆ. ನಾನು ಆರಿಸಿಕೊಂಡ ದಾರಿನೇ ಬೇರೆ ನನಗೆ ಅದೇ ರೀತಿ ಹಣ ಮಾಡಬೇಕೆಂದಿದ್ದರೆ ಅವರು ಹೋದ ರೀತಿಯಲ್ಲೇ ನಾನೂ ಹೋಗಬೇಕಿತ್ತು ಅದು ನನ್ನಿಂದ ಸಾದ್ಯವಿಲ್ಲ. ಎಂದಾಗ ನನಗೆ ನನ್ನ ತಂದೆಯ ವ್ಯಕ್ತಿತ್ವದ ಆಳ ಎಷ್ಟು ಎಂದು ತಿಳಿಯಿತು. ಮುಂದುವರಿಯುತ್ತಾ ನನ್ನ ತಂದೆ ಹೇಳುತ್ತಾರೆ "ನನ್ನ ಮನೆಗೆ ಇಂದಿಗೂ ಒಕ್ಕಲು ಅಕ್ಕಿ, ಕಾಯಿ ಇತರೆ ಹಸಿರುವಾಣಿ ತರುತ್ತಾನೆ, ಬೇಡ ಈಗ ನೀನು ಒಕ್ಕಲು ಅಲ್ಲ, ನಾನು ಒಡೆಯನೂ ಅಲ್ಲ ಎಂದರೂ ಸಹ ತಂದು ನನ್ನ ಕಾಲಿಗೆರಗಿ ಆಶೀರ್ವಾದ ತೆಗೆದುಕೊಂಡು ಹೋಗುತ್ತಾರೆ, ಕೇಳಿದರೆ ಅದು ನಮ್ಮ ಧರ್ಮ ನಿಮ್ಮ ಜಮೀನನ್ನೆಲ್ಲಾ ನಮಗೆ ನೀವೇನು ಮಾತನಾಡದೆ ಸಂತೋಷದಿಂದ ನಮ್ಮ ಹೆಸರಿಗೆ ಮಾಡಿ ತಮ್ಮದೆಲ್ಲವನ್ನೂ ತ್ಯಾಗ ಮಾಡಿದಿರಿ. ಆದರೆ ಕೆಲವು ವ್ಯಕ್ತಿಗಳು ಈ ಒಕ್ಕಲು ಕಾನೂನು ಬರುವ ಮುಂಚೆ ಬಲವಂತದಿಂದ ತಮ್ಮ ಜಮೀನುಗಳನ್ನು ಬಿಡಿಸಿಕೊಂಡು ದರ್ಪವನ್ನು ತೋರಿಸಿದರು. ಮೇಲಾಗಿ ತಾವು ನಮ್ಮ ಊರಿನ ನಮ್ಮ ಜನಗಳ ಯಾವುದೇ ವ್ಯಾಜ್ಯ ಇರಲಿ ಯಾವುದೇ ಶುಲ್ಕವಿಲ್ಲದೆ ಪರಿಹರಿಸುತ್ತೀರಿ ನೀವು ನಮಗೆ ದೇವರಲ್ಲದೆ ಮತ್ತಾರು? ಎಂದು ಹೇಳುತ್ತಾನೆ. ಇದೊಂದು ಸಣ್ಣ ಉದಾಹರಣೆ ನೀನು ಎಷ್ಟೇ ಹಣಕೊಟ್ಟರೂ ಈ ಸಂತೃಪ್ತಿ ಸಿಗುವುದಿಲ್ಲ" ಒಟ್ಟಿನಲ್ಲಿ ಆ ಒಂದು ಸಂಗೀತ ನಮಗೆ ಬದುಕಿನ ಪಾಠವನ್ನೇ ಕಲಿಸುತ್ತದೆ. ನಮ್ಮೆಲ್ಲ ರೋಟರಿ ಬಂಧುಗಳಿಗೆ ಕೆ.ಆರ್. ಕಾರಂತ್ ಅವರ ಬದುಕಿನ ತತ್ವದ ಪರಿಚಯವಾಗಲಿ ಎಂದು ಒಂದು ಸಂಗತಿಯನ್ನು ಸಂಪಾದಕೀಯದಲ್ಲಿ ಬರೆದೆ.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ತಾ। 09/10/2025 ರಂದು ನಡೆದ ನಮ್ಮ ವಾರದ ಸಭೆಗೆ ರೊ. ಸುಮಾ ಪುತ್ರನ್ ಅತಿಥಿಯಾಗಿ ಆಗಮಿಸಿ ತಮ್ಮ ಕುಟುಂಬದೊಡನೆ ಪ್ಯಾರಿಸ್ ಪ್ರವಾಸ ಮಾಡಿದ ಸುಮಧುರ ನೆನಪುಗಳನ್ನು ಕ್ಲಬ್ಬಿನ ಸಭಾಸದರೆದುರು ತೆರೆದಿಟ್ಟರು. ತಮ್ಮ ಪ್ರವಾಸವನ್ನು ದೃಶ್ಯ ಕಾವ್ಯದ ರೀತಿಯಲ್ಲಿ ತಮ್ಮ ಪತಿ ರೊ. ಉಮೇಶ್ ಪುತ್ರನ್ ಅವರ ಜೊತೆ ಜೊತೆಯಾಗಿ ತಮ್ಮ ಮಧುರ ಅನುಭವಗಳನ್ನು ಹಂಚಿಕೊಂಡರು. ಆಗಮಿಸಿದ ಅತಿಥಿಗಳನ್ನು ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತ ವಾರದ ವರದಿ ವಾಚಿಸಿದರು. ರೊ. ಶ್ರೀನಿವಾಸ ಶೇಟ್ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ರೊ. ವಿವಿಯನ್ ಕ್ರಾಸ್ತ ವಾರದ ಚಿಂತನೆ ನಡೆಸಿದರು.ರೊ. ಸುರೇಖಾ ಪುರಾಣಿಕ್ ರೋಟರಿ ಮಾಹಿತಿ ತಿಳಿಸಿದರು ಸಭೆಯ ಕೊನೆಯಲ್ಲಿ ಹಾಸ್ಯವನ್ನು ರೊ. ಉತ್ತಮ್ ಕುಮಾರ್ ಶೆಟ್ಟಿ ನಡೆಸಿಕೊಟ್ಟರು. ರೊ. ಸತ್ಯನಾರಾಯಣ್ ಪುರಾಣಿಕ್ ಧನ್ಯವಾದ ಅರ್ಪಿಸಿದರು.

## ಮಾನವ ರೂಪದ ಮೃಗಗಳು:-


ಯಾರು ಯೋಚಿಸಲು ಅಸಮರ್ಥರೋ, ವಿವೇಕರಹಿತರೋ ಅವರನ್ನು (ದೆಹಲಿ, ಇತರ ನಗರಗಳು) ಯುದ್ಧಸಮಯದ ಮನೆಗಳಿಗೆ ಹೋಲಿಸಬಹುದು. ಮನೆಯ ಮುಂಭಾಗದಲ್ಲಿ ಒಂದು ಫಲಕ ನೇತಾಡುತ್ತಿರುತ್ತದೆ. ಅದರಲ್ಲಿ "ಮೇಲ್ಭಾಗ ಬಾಡಿಗೆಗಿದೆ" ಎಂದಿರುತ್ತದೆ. ಹಾಗೆಯೇ ನಮ್ಮ ತಲೆಯ ಮೇಲ್ಭಾಗವನ್ನೂ ನಾವು ಇಂದ್ರಿಯಗಳ ದಾಸನಾಗಿಸಿದ್ದೇವೆ. ಅದು ಬಳಕೆಯಾಗದೇ ಪೂರ್ಣ ನಿಷ್ಕ್ರಿಯ ಗೊಂಡಿದೆ. ಈಗ ನಾವು ಅದನ್ನು ಸ್ವಲ್ಪವಾದರೂ ಉಪಯೋಗಿಸಲು ಕಲಿಯಬೇಕು. ಅದು ವಿಚಾರಮಾಡುವ, ವಿವೇಚಿಸುವ ಸಹಜ ಶಕ್ತಿ ಯಾಗಿದ್ದು ನಮ್ಮ ಪರಿವರ್ತನೆಗೆ ಅದೊಂದೇ ಸಾಕು. ಮಾನವ ಮಾತ್ರ ವಿವೇಕವುಳ್ಳವನು. ಪಶುಗಳಲ್ಲ. ಮೂರು ನಾಲ್ಕು ವಯಸ್ಸಿಗಿಂತ ಚಿಕ್ಕ ಮಕ್ಕಳೂ ವಿವೇಕರಹಿತರು. ನಂತರವೇ ಅದು ಬೆಳೆಯುವುದು. ಆದ್ದರಿಂದ ನಮ್ಮ ಪ್ರಮುಖ ವಿಷಯವೇ ವಿವೇಕ. ಇದರಿಂದಲೇ ಅವನು ನಿಜವಾದ ಭಾವದಲ್ಲಿ ಮನುಷ್ಯನಾಗುತ್ತಾನೆ, ಕೇವಲ ತೋರಿಕೆಯಿಂದಲ್ಲ. ಸಂಸ್ಕೃತ ದಲ್ಲಿ ಒಂದು ನುಡಿಗಟ್ಟಿದೆ, "ಮನುಷ್ಯ ರೂಪೇಣ ಮೃಗಾಶ್ಚರಂತಿ" ಅಂದರೆ ಮನುಷ್ಯನಂತೆ ಕಾಣುವ ಮೃಗಗಳು ಚಲಿಸುತ್ತಿವೆ ಎಂದು. ಮನುಷ್ಯನ ದೇಹ ಆದರೆ ಒಳಗೆ ಮೃಗದ ಗುಣಗಳು. ಈ ಬಗೆಯ ಮನುಷ್ಯರಿಗೂ ನಿಜವಾದ ಮನುಷ್ಯರಿಗೂ ವಿವೇಕ ವೊಂದೇ ವ್ಯತ್ಯಾಸ. ವಿವೇಕದಿಂದಲೇ ವೈರಾಗ್ಯ ಮತ್ತು ಬಂಧವಿಮೋಚನೆ ಸಿಗುವುದು.

**– ಸ್ವಾಮಿ ರಂಗನಾಥಾನಂದ**


॥ ಓಂ ಶ್ರೀ ಮಂಜುನಾಥಾಯ ನಮಃ ॥



**ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು, ಆಸ್ಪತ್ರೆ**
**ಹಾಗೂ ಸಂಶೋಧಕ ಕೇಂದ್ರ ಕುತ್ಪಾಡಿ ಉಡುಪಿ**
**ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್(ರಿ.) ಕುಂದಾಪುರ ತಾಲೂಕು**
**ರೋಟರಿ ಕ್ಲಬ್ ಕುಂದಾಪುರ ದಕ್ಷಿಣ,**
**ದತ್ತಾತ್ರಮ ಆದಿಶಕ್ತಿ ಮಠ ಚಾರಿಟೇಬಲ್ ಟ್ರಸ್ಟ್, ಆನಗಳ್ಳಿ.**



ಗೆಳೆಯರ ಬಳಗ(ರಿ.) ಆನಗಳ್ಳಿ, ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಸ್ರೂರು.
ಇವರ ಸಹಯೋಗದೊಂದಿಗೆ ಆನಗಳ್ಳಿಯಲ್ಲಿ
**ಡಾ। ಡಿ. ವೀರೇಂದ್ರ ಹೆಗ್ಗಡೆಯವರು, ಪರಮಪೂಜ್ಯ ಧರ್ಮಾಧಿಕಾರಿಗಳು,**
**ಶ್ರೀ ಕ್ಷೇತ್ರ ಧರ್ಮಸ್ಥಳ ಇವರ ಪಟ್ಟಾಭಿಷೇಕದ 58ನೇ ವರ್ಧಂತಿ ಪ್ರಯುಕ್ತ**
ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಎಸ್.ಡಿ.ಎಂ ಆಯುರ್ವೇದ ಕಾಲೇಜು
ಮತ್ತು ಆಸ್ಪತ್ರೆಯ ನುರಿತ ವೈದ್ಯರುಗಳಿಂದ

**ಉಚಿತ ಆರೋಗ್ಯ ತಪಾಸಣೆ ಮತ್ತು ಆರೋಗ್ಯ ಮಾಹಿತಿ ಶಿಬಿರ**

ತಾ: 15-10-2025ನೇ ಬುಧವಾರ । ಸಮಯ : ಬೆಳಿಗ್ಗೆ ಗಂಟೆ 9.00ರಿಂದ ಮಧ್ಯಾಹ್ನ 1.00ಗಂಟೆವರೆಗೆ
ಸ್ಥಳ : ಗೆಳೆಯರ ಬಳಗ, ಕಲಾಮಂದಿರ, ಆನಗಳ್ಳಿ

ಉದ್ಘಾಟಕರು : **ಶ್ರೀ ಅಶೋಕ್ ಕೆರೆಕಟ್ಟೆ** ಅಧ್ಯಕ್ಷರು, ಕೇಂದ್ರ ಒಕ್ಕೂಟ ಸಮಿತಿ ಕುಂದಾಪುರ ತಾಲೂಕು
ಅಧ್ಯಕ್ಷರು : **ರೊ. ಸಚಿನ್ ನಕ್ಕತ್ತಾಯ,** ಅಧ್ಯಕ್ಷರು, ರೋಟರಿ ಕ್ಲಬ್ ಕುಂದಾಪುರ ದಕ್ಷಿಣ
ಮುಖ್ಯ ಅತಿಥಿಗಳು : **ಡಾ. ನಾಗರಾಜ್ ಎಸ್.,**
ವೈದ್ಯಕೀಯ ಅಧೀಕ್ಷಕರು, ಎಸ್. ಡಿ. ಎಂ. ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಉಡುಪಿ
: **ಶ್ರೀ ಉಮೇಶ್ ಶೆಟ್ಟಿ ಎಚ್.,**
ಕ್ಷೇತ್ರ ಯೋಜನಾಧಿಕಾರಿ, ಶ್ರೀ ಕ್ಷೇ.ಧ.ಗ್ರಾ.ಯೋ.ಬಿ.ಸಿ ಟ್ರಸ್ಟ್(ರಿ.) ಕುಂದಾಪುರ ತಾಲೂಕು
: **ಶ್ರೀಮತಿ ಫೆರ್ಮಿನಾ ಮತ್ತು ಶ್ರೀ ಸುಭಾಸ್ ಪೂಜಾರಿ,**
ಪ್ರವರ್ತಕರು, ದತ್ತಾತ್ರಮ ಆದಿಶಕ್ತಿಮಠ & ಚಾರಿಟೇಬಲ್ ಟ್ರಸ್ಟ್ ಅನಗಳ್ಳಿ
: ಡಾ. ವಿದ್ಯಾ, ವೈದ್ಯಾಧಿಕಾರಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಬಸ್ರೂರು
: **ಶ್ರೀ ಗಣೇಶ್ ಕೆ.ಕಾಂಚನ್,** ಅಧ್ಯಕ್ಷರು ಗೆಳೆಯರ ಬಳಗ(ರಿ.) ಅನಗಳ್ಳಿ
: **ಶ್ರೀ ಹಸನ್,** ಬೀಟ್ ಪೊಲೀಸ್ ಆನಗಳ್ಳಿ, ಕುಂದಾಪುರ ಠಾಣೆ
: **ಶ್ರೀಮತಿ ಮೋನಿಕಾ,** ಬೀಟ್ ಪೊಲೀಸ್ ಆನಗಳ್ಳಿ, ಕುಂದಾಪುರ ಠಾಣೆ
: **ಶ್ರೀ ಅಣ್ಣಪ್ಪ ಪೂಜಾರಿ,** ಅಧ್ಯಕ್ಷರು ಶ್ರೀ ಕ್ಷೇ.ಧ.ಗ್ರಾ.ಯೋ.ಬಿ.ಸಿ ಟ್ರಸ್ಟ್(ರಿ.) ಆನಗಳ್ಳಿ ಒಕ್ಕೂಟ
: **ಶ್ರೀ ಸತೀಶ್ ಪೂಜಾರಿ,** ಅಧ್ಯಕ್ಷರು ಶ್ರೀ ಕ್ಷೇ.ಧ.ಗ್ರಾ.ಯೋ.ಬಿ.ಸಿ ಟ್ರಸ್ಟ್(ರಿ.) ಹೇರಿಕುದ್ರು ಒಕ್ಕೂಟ

ಈ ಶಿಬಿರದಲ್ಲಿ ಪಾರ್ಶ್ವವಾಯು, ಸಂಧಿವಾತ,ಬೆನ್ನುಹುರಿ ಮತ್ತು ಕುತ್ತಿಗೆಯ ನರದ ತೊಂದರೆ,ಆಮ್ಲಪಿತ್ತ ಮತ್ತು ಕರುಳಿನ ಸಂಬಂಧಿ ಕಾಯಿಲೆ,ಚರ್ಮರೋಗ, ಸೋರಿಯಾಸಿಸ್, ಪೈಲ್ಸ್, ಫಿಸ್ತುಲಾ, ಸೈನಸ್, ಸ್ತ್ರೀ ರೋಗ, ಪ್ರಸೂತಿ ಸಂಬಂಧಿ ಕಾಯಿಲೆಗಳು, ಬಂಜೆತನ, ಗರ್ಭ ಸಂಸ್ಕಾರ, ಬಾಲ ರೋಗ(ಮಕ್ಕಳ ಚಿಕಿತ್ಸೆ) ಮನೋರೋಗ,ಅಸ್ತಮ ಮತ್ತು ಅಲರ್ಜಿ ಸಂಬಂಧಿ ಕಾಯಿಲೆ, ಶಿರ ಶೂಲ, ಕಣ್ಣು, ಕಣ್ಣಿನ ಪೊರೆಯ ತೊಂದರೆ,ಕಿವಿ,ಮೂಗು,ಗಂಟಲು ಸಮಸ್ಯೆಗಳು,ಮುಖ ತ್ವಚೆ, ಸೌಂದರ್ಯ, ಸ್ವಾಸ್ಥ್ಯ ರಕ್ಷಣೆ ಬಗ್ಗೆ, ಬೊಜ್ಜುತನ, ಥೈರಾಯಿಡ್ ಖಾಯಿಲೆ, ಮಧುಮೇಹ ತಪಾಸಣೆ, ಉದ್ವೇಗ, ಖಿನ್ನತೆ, ನಿದ್ರಾಹೀನತೆ, ಗೀಳುರೋಗ, ಮದ್ಯ ಮತ್ತು ಮಾದಕ ವ್ಯಸನಜನ್ಯರೋಗ, ಮಾನಸಿಕ ಒತ್ತಡ, ಪಂಚಕರ್ಮ ಚಿಕಿತ್ಸೆಗಳ ಬಗ್ಗೆ ಮಾಹಿತಿಯೊಂದಿಗೆ ಎಲ್ಲಾ ರೋಗಗಳ ಉಚಿತ ತಪಾಸಣೆ ಮತ್ತು ಔಷಧ, ಹೃದ್ರೋಗ, ಮಾನಸಿಕ ತೊಂದರೆ ಹಾಗೂ ಮಹಿಳೆ ಮತ್ತು ಮಕ್ಕಳ ರೋಗಗಳ ಪ್ರತಿಬಂಧಕ ಉಪಾಯಗಳ ಬಗ್ಗೆ ವಿಶೇಷ ಮಾಹಿತಿ ನೀಡಲಾಗುತ್ತದೆ. ಈ ಶಿಬಿರದಲ್ಲಿ ಅಗತ್ಯವಿರುವ ಶಿಬಿರಾರ್ಥಿಗಳಿಗೆ ECG ಮೂಳೆ,ಖನಿಜ ಸಾಂದ್ರತೆ ಹಾಗೂ ಮಧುಮೇಹದ ರಕ್ತ ತಪಾಸಣೆಯನ್ನು ನಡೆಸಲಾಗುವುದು.

ಸರ್ವರಿಗೂ ಆದರದ ಸ್ವಾಗತ


## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು--83೦ ಆತ್ಮ ಸಾಕ್ಷಾತ್ಕಾರದ ಮೆಟ್ಟಿಲುಗಳು

*ಶಿಷ್ಯನ ಪ್ರಶ್ನೆಗಳಿಗೆ ಗುರುವಿನ ಮೆಚ್ಚುಗೆ *

ಯದ್ಬೋದ್ಧವ್ಯಂ ತವೇದಾನೀಮಾತ್ಮಾ
ನಾತ್ಮ ವಿವೇಚನಮ್।
ತದುಚ್ಯತೇ ಮಯಾ ಸಮ್ಯಕ್
ಶ್ರುತ್ವಾತ್ಮನ್ಯವಧಾರಯ ॥71॥

ಈಗ ಯಾವ ಆತ್ಮಾನಾತ್ಮ ವಿವೇಚನೆಯನ್ನು ನೀನು ತಿಳಿದುಕೊಳ್ಳಬೇಕೋ ಅದನ್ನು ಹೇಳುತ್ತೇನೆ. ಚೆನ್ನಾಗಿ ಕೇಳಿ ಮನಸ್ಸಿನಲ್ಲಿ ನಿಶ್ಚಯಿಸಿಕೊ.

ಈಗ ಗುರುವು ಶಿಷ್ಯನು ತಿಳಿದುಕೊಳ್ಳಬೇಕಾದ ಆತ್ಮ, ಅನಾತ್ಮಗಳನ್ನು ಬೇರ್ಪಡಿಸುವ, ಅಭ್ಯಾಸ ಮಾಡುವ ಬಗ್ಗೆ ಹೇಳಲು ಮುಂದಾಗುತ್ತಾನೆ. (49 ನೇ ಶ್ಲೋಕದಲ್ಲಿ) ಶಿಷ್ಯನು ಏಳು ಪ್ರಶ್ನೆಗಳನ್ನು ಎತ್ತಿದ್ದನು. ಗುರುವು ಮೊದಲು ನಾಲ್ಕನೇಯದಕ್ಕೆ ಉತ್ತರಿಸಿ ಯಾಗಿದೆ. ಈಗ ಉಳಿದವನ್ನು ಒಂದರ ನಂತರ ಮತ್ತೊಂದಾಗಿ ಉತ್ತರಿಸ ತೊಡಗುತ್ತಾನೆ. ಗುರುವು ಹೇಳುತ್ತಾನೆ: "ಇದನ್ನು ಶ್ರದ್ಧೆಯಿಂದ ಕೇಳಿ ಮನಸ್ಸಿನಲ್ಲಿ ಅದರ ಬಗ್ಗೆ ನಿರ್ಣಯ ಮಾಡು". ನಾವು ಏನನ್ನು ಆಲಿಸಿದಾಗಲೂ ಅದರ ಬಗ್ಗೆ ಯೋಚಿಸಿ ಅದನ್ನು ಅನುಷ್ಠಾನಕ್ಕೆ ತರಬೇಕು. ಕೃಷ್ಣನು ಅರ್ಜುನನಿಗೆ ಅತ್ಯಂತ ಉತ್ಕೃಷ್ಟ ವಾದ ಉಪದೇಶ ಗಳನ್ನು (ಗೀತೆ 18.63) ಮಾಡಿದ ನಂತರ, "ನಾನು ನಿನಗೆ ಉನ್ನತ ವಾದ ಜ್ಞಾನವನ್ನು ನೀಡಿದ್ದೇನೆ. ಅದರ ಬಗ್ಗೆ ಯೋಚಿಸಿ ನಿನಗೆ ಹೇಗೆನ್ನಿಸುವುದೋ ಹಾಗೆ ಅನುಸರಿಸು". ಶಿಕ್ಷಕರು ನಮಗೆ ಯೋಚಿಸುವ ದಿಕ್ಕನ್ನು ತೋರಿಸು ತಾರೆ. ಉಳಿದದ್ದನ್ನು ನಾವು ಮುಂದುವರಿಸಬೇಕು. ಬೇರೆ ಯಾರೋ ನಮ್ಮ ಪರವಾಗಿ ಯೋಚಿಸಿ ನಮಗಾಗಿ ಅನುಷ್ಠಾನ ಮಾಡುವುದಕ್ಕೆ ಆಗದು. ನಾವೇ ಯೋಚಿಸಬೇಕು, ಅನುಷ್ಠಾನ ಮಾಡಬೇಕು. ವೇದಾಂತದ ಎಲ್ಲ ಗುರುಗಳೂ, ಬುದ್ಧ, ಶಂಕರರು, ಪರಮಹಂಸರು ನಮಗೆ ಮಾರ್ಗದರ್ಶನ ಮಾಡು ತ್ತಾರೆ, ನಂತರದ ಹಾದಿ ಸವೆಸುವುದು ನಮ್ಮದೇ ಜವಾಬ್ದಾರಿ. ಮತ್ತ್ಯಾವ ದಾರಿಯೂ ಇಲ್ಲ. ಮುಂದೆ ಗುರುವು ಅನಾತ್ಮ ಎಂದರೆ ಏನು? ಎಂಬ ಪ್ರಶ್ನೆಗೆ ಉತ್ತರಿಸಲು ಮುಂದಾಗುತ್ತಾನೆ.

ಆತ್ಮ ಸಾಕ್ಷಾತ್ಕಾರದ ಮೆಟ್ಟಿಲುಗಳು

ಐದನೆಯ ಪ್ರಶ್ನೆಗೆ ಉತ್ತರ: ಯಾವುದು ಅನಾತ್ಮ?

ಸ್ಥೂಲ ಶರೀರ ಭಾಗ 1

ಮಜ್ಜಾಸ್ಥಿ ಮೇದಃ ಪಲ ರಕ್ತ ಚರ್ಮ
ತ್ವಗಾಹ್ವಯೈರ್ಧಾತುಭಿರೇಭಿರನ್ವಿತಮ್।
ಪಾದೋರುವಕ್ಷೋಭುಜ ಪೃಷ್ಠ ಮಸ್ತಕೈ
ರಂಗೈರುಪಾಂಗೈರುಪಯುಕ್ತ ಮೇತತ್॥72॥

ಮಜ್ಜೆ ಮೂಳೆ ಕೊಬ್ಬು ಮಾಂಸ ರಕ್ತ ಚರ್ಮ ಹೊರಚರ್ಮ ಎಂಬ ಈ ಸಪ್ತ ಧಾತುಗಳಿಂದ ಕೂಡಿ ಕಾಲು ತೊಡೆ ಎದೆ ತೋಳು ಬೆನ್ನು ತಲೆ ಮೊದಲಾದ ಅಂಗ ಉಪಾಂಗಗಳಿಂದಲೂ ಕೂಡಿ -----

ಅಹಂ ಮಮೇತಿ ಪ್ರಥಿತಂ ಶರೀರಂ
ಮೋಹಾಸ್ಪದಂ ಸ್ಥೂಲಮಿತೀರ್ಯತೇ ಬುಧೈಃ ।
ನಭೋನಭಸ್ವದ್ದಹನಾಂಬು ಭೂಮಯಃ
ಸೂಕ್ಷ್ಮಾಣಿ ಭೂತಾನಿ ಭವಂತಿ ತಾನಿ ॥73॥

ನಾನು ನನ್ನದು ಎಂದು ಪ್ರಸಿದ್ಧವಾಗಿ ಮೋಹಕ್ಕೆ ಆಸ್ಪದವಾಗಿರುವ ಇದನ್ನು ಸ್ಥೂಲ ಶರೀರವೆಂದು ಪಂಡಿತರು ಹೇಳುತಾರೆ. ಆಕಾಶ ವಾಯು ಅಗ್ನಿ ನೀರು ಭೂಮಿ ಇವು ಸೂಕ್ಷ್ಮ ಭೂತಗಳು.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ
ಮಧ್ಯಮಾಮ್ । ಅಸ್ಮದಾಚಾರ್ಯ ಪರ್ಯಂತಾಮ್
ವಂದೇ ಗುರುಪರಂಪರಾಮ್॥
ಶ್ರೀ ಗುರುಚರಣಾರವಿಂದಾರ್ಪಣಮಸ್ತು.




Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು




ತಾ. 21–10–2025ನೇ ಮಂಗಳವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಎಸ್. ವಿಜಯ ಶೆಟ್ಟಿ ಮತ್ತು ಆ್ಯನ್ ಗೀತಾ ವಿ. ಶೆಟ್ಟಿ ಇವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು.

**ಮೊ. : 9448122171**




## ಹುಟ್ಟುಹಬ್ಬದ ಶುಭಾಶಯಗಳು



**ರೊ. ಸತ್ಯನಾರಾಯಣ ಪುರಾಣಿಕ್**
**ದಿನಾಂಕ : ಅಕ್ಟೋಬರ್ 19**
**ಮೊಬೈಲ್ : 9449854400**



**ರೊ. ಪಿಪಿ. ಜೆ. ಶ್ರೀನಾಥ್**
**ದಿನಾಂಕ : ಅಕ್ಟೋಬರ್ 19**
**ಮೊಬೈಲ್ : 9448870249**

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

"Any day above ground is a good day. Before you complain about anything, be thankful for your life and the things that are still going well." *- Germany Kent*

"Keep moving forward like a flowing river *- Bhavana Atmakuri*"

*This Bulletin is sponsored by :*

**Rtn. K. K. Kanchan**
**Mob. : 9448328632**

For Private Circulation only

Email id – rotaryclub.kundapurasouth@gmail.com



Rtn. K. T. Surendranath 1995-96



Rtn. S. Sadananda Chatra 1996-97



Rtn. B. C. Somayaji 1997-98



Rtn. K. Suresh Kamath 1998-99



Rtn. S. Subraya Halambi 1999-2000



Rtn. S. Vijaya Shetty 2000-01



Rtn. K. Seetharama Nackathaya 2001-02



Rtn. U. S. Shenoy 2002-03



Rtn. Dr. Umesh Puthran 2003-04



Rtn. Dr. B. V. Udupa 2004-05



Rtn. A. Shantharam Pai 2005-06



Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25